ಅ) ಈಗಾಗಲೇ ಶೇಕಡಾ 25 ಹುದ್ದೆಗಳನ್ನು ಸೇವಾ ಹಿರಿತನದ ಮೇಲೆ ಪದವಿ ಪಡೆದ ಅರ್ಹ ಶಾಲಾ ಶಿಕ್ಷಕರನ್ನು ಬಡ್ತಿ ಮೇಲೆ ಮೇಮಕಾತಿ ಮಾಡಲಾಗುತ್ತದೆ. ಪೂರ್ಣ ಪ್ರಮಾಣದಲ್ಲಿ ಮರಾಡಿದ್ದಲ್ಲಿ, ಪದವಿ ಪಡೆದ ನಿರುದ್ಯೋಗಿ ಅಭ್ಯರ್ಥಿಗಳನ್ನು ನೇರ ನೇಮಕಾತಿ ಮೂಲಕ ನೇಮಕ ಮಾಡಲು ಸಾಧ್ಯವಾಗುವುದಿಲ್ಲ, ಹಾಗೂ ನೇರ ನೇಮಕಾತಿ ಪ್ರಕ್ರಿಯೆ ಪೂರ್ಣವಾಗಿ ನಿಲ್ಲಿಸಬೇಕಾಗುತ್ತದೆ.

ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ಸೌಲಭ್ಯಗಳು

390 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ, ಅಂತರರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವ ಕ್ರೀಡಾ ಪಟುಗಳನ್ನು ಆಯ್ಕೆ ಮಾಡುವ ವಿಧಾನಗಳೇನು? ಮತ್ತು ಅವರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಯಾವ ರೀತಿಯ ಸೌಲಭ್ಯಗಳನ್ನು ನೀಡುತ್ತದೆ?

ಆ) ಬೇರೆ ಬೇರೆ ಕ್ರೀಡಾ ಕ್ಷೇತ್ರಗಳಲ್ಲಿ ಸ್ಪರ್ಧಿಸುವ ರಾಜ್ಯ ರಾಷ್ಟ್ರೀಯ ಅಂತರ್ ರಾಷ್ಟ್ರೀಯ ಕ್ರೀಡಾ ಪಟುಗಳಿಗೆ ನೀಡಲಾಗುತ್ತಿರುವ ಪ್ರವಾಸ ಭತ್ಯೆ, ಆಹಾರ ಭತ್ಯೆ ರಜಾ ಸೌಲಭ್ಯ ಹಾಗೂ ಇನ್ನಿತರ ಸೌಲಭ್ಯಗಳೇನು? (ಪ್ರತ್ಯೇಕವಾಗಿ ವಿವರ ಒದಗಿಸುವುದು).

ಶ್ರೀ ಅಜಯಕುಮಾರ್ ಸರನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ರಾಜ್ಯ, ಅಂತರ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳನ್ನು ಅಂಗೀಕೃತವಾದ ಆಯಾಯಾ ರಾಜ್ಯ ಕ್ರೀಡಾ ಸಂಸ್ಥೆಗಳು ಆಯ್ಕೆ ಮಾಡುತ್ತವೆ. ಅಂತರರಾಷ್ಟ್ರ ಮಟ್ಟದ ಪಂದ್ಯಾವಳಿಯಲ್ಲಿ ಭಾಗವಹಿಸಲು ಕ್ರೀಡಾ ಪಟುಗಳನ್ನು ಆಯಾಯ ಕ್ರೀಡಾ ರಾಷ್ಟ್ರೀಯ ಪಡೆರೇಷನಗಳು ಭಾರತೀಯ ಕ್ರೀಡಾ ಪ್ರಾಧಿಕಾರದ ಸಹಯೋಗದೊಂದಿಗೆ ಆಯ್ಕೆ ಮಾಡುತ್ತವೆ. ರಾಜ್ಯ ಮಟ್ಟದ ಪಂದ್ಯಾವಳಿಗಳನ್ನು ನಡೆಸಿದಾಗ ಉತ್ತಮ ಪ್ರದರ್ಶನ ನೀಡುವ ಕ್ರೀಡಾ ಪಟುಗಳನ್ನು ಆಯ್ಕೆ ಮಾಡಿ ತರಬೇತಿ ನೀಡಿ ಅವರಲ್ಲಿ ಅತ್ಯುತ್ತಮ ಸಾಧನೆ ಮಾಡುವವರನ್ನು ಮೇಲ್ಕಂಡ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಕಳುಹಿಸಲಾಗುತ್ತದೆ. ಈ ಜವಾಬ್ದಾರಿಯು ಆಯಾಯಾ ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಸೇರಿದ್ದಾಗಿದೆ.

ಈ ರೀತಿ ಆಯ್ಕೆಯಾದ ತಂಡವು ಪಂದ್ಯಾವಳಿಗಳಲ್ಲಿ ಭಾಗವಹಿಸಲು ಅರಳುವಾಗ, ಆ ಕ್ರೀಡಾ ತಂಡಕ್ಕೆ ಪ್ರವಾಸ ಭತ್ಯೆ, ದಿನ ಭತ್ಯೆ, ವೈದ್ಯಕೀಯ ಸೌಲಭ್ಯಗಳು ರಾಷ್ಟ್ರ ಹಾಗೂ ಗಂಟನ್ನು ನೀಡಲಾಗುತ್ತಿದೆ. ರಾಷ್ಟ್ರ ಹಾಗೂ ಅಂತರ್ ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿ ವಿಜೇತರಾದ ಕರ್ನಾಟಕದ ಕ್ರೀಡಾ ಪಟುಗಳಿಗೆ ನಗದು ಬಹುಮಾನ ನೀಡಿ ಗೌರವಿಸಲಾಗುತ್ತಿದೆ.

ಆ) ರಾಷ್ಟ್ರೀಯ ಅಂತರವಲಯ, ದಕ್ಷಿಣವಲಯ ಮುಂತಾದ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಕ್ರೀಡಾ ಪಟುಗಳಿಗೆ ಬೆಂಗಳೂರಿನಿಂದ ಪಂದ್ಯಾವಳಿ ನಡೆಯುವ ಸ್ಥಳವರೆಗೆ ರೈಲು, ಬಸ್ ಚಾರ್ಜು ನೀಡಲಾಗುತ್ತಿದೆ. ದಿನವೊಂದಕ್ಕೆ ರೂ. 20.00 ರಂತೆ ಆಹಾರ ಭತ್ಯೆ ನೀಡಲಾಗುತ್ತಿದೆ.

ಪ್ರತಿ ಪಂದ್ಯಾವಳಿಗೆ ಪ್ರತಿ ಕ್ರೀಡಾ ಪಟುವಿಗೆ ರೂ. 100.00 ಕ್ರೀಡಾ ಗಂಟು ನೀಡಲಾಗುತ್ತಿದೆ. ಅಲ್ಲದೆ ವೈದ್ಯಕೀಯ ಖರ್ಚು, ಸಾರಿಗೆ ಖರ್ಚನ್ನು ನೀಡಲಾಗುತ್ತಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವ ಕರ್ನಾಟಕ ಕ್ರೀಡಾ ಪಟುಗಳಿಗೆ ಬೆಂಗಳೂರಿನಿಂದ ದೆಹಲಿಯವರೆಗೆ ರೈಲು ವೆಚ್ಚ, ದಹಲಿಯಿಂದ ಪಂದ್ಯಾವಳಿ ನಡೆಯುವ ಸ್ಥಳಕ್ಕೆ ವಿಮಾನ ದರ, ವೀಸಾ, ಏರಪೋರ್ಟ, ಟ್ಯಾಕ್ಸ್ ಖರ್ಚು, ಆಹಾರ ಭತ್ಯೆ, ವಸತಿ ಖರ್ಚುಗಳನ್ನು ನೀಡಲಾಗುತ್ತದೆ. ಕೇಂದ್ರ ಸರ್ಕಾರ ಅಥವಾ ಸಂಬಂಧಿತ ಕ್ರೀಡಾ ಪೆಡರೇಷನ್ ಈ ವೆಚ್ಚಗಳನ್ನು ಭರಿಸದಿದ್ದಾಗ ಮಾತ್ರ ಈ ಸೌಲಭ್ಯಗಳನ್ನು ನೀಡಲಾಗುವುದು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಡಿ. ಮಂಜುನಾಥ : ತಾರೀಖು 20.9.95ರ 26ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 48 ಪ್ರಶ್ನೆಗಳ 41 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಿದ್ದೇನೆ.

ರಾಜ್ಯದಲ್ಲಿರುವ ಸರಕಾರಿ ಡೆಂಟಲ್ ಕಾಲೇಜುಗಳು

2221 - ಶ್ರೀ ಯು.ಜಿ. ಬಣಕಾರ್ (ಹಿರೇಕೆರೂರ್) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಡೆಂಟಲ್ ಕಾಲೇಜುಗಳು ಎಷ್ಟು? ಯಾವುವು?

ಆ) ಬೆಂಗಳೂರಿನಲ್ಲಿರುವ ಸರ್ಕಾರಿ ಡೆಂಟಲ್ ಕಾಲೇಜು ಎಂದು ಪ್ರಾರಂಭಿಸಲಾಯಿತು ಪ್ರಾರಂಭವಾದ ವರ್ಷದಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಇತ್ತು? ಆ ವೇಳೆಯಲ್ಲಿ ಇದ್ದ ಸಿಬ್ಬಂದಿಯ ವಿವರ ಏನು? ಪ್ರಿನ್ಸಿಪಾಲ್, ಪ್ರೊಪೆಸರ್, ಲೆಕ್ಚರರ್, ಅಸಿಸ್ಟೆಂಟ್ ಪ್ರೊಪೆಸರ್, ನರ್ಸ ಹಾಗೂ 'ಡಿ' ವರ್ಗದವರ ವಿವರವನ್ನೊದಗಿಸುವುದು.

ಇ) ಈಗ ಕಾಲೇಜಿನಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ಇದೆ. ಈಗ ಇರುವ ಸಿಬ್ಬಂದಿಯ ವಿವರಗಳನ್ನೊದಗಿಸುವುದು?

ಈ) ಡೆಂಟಲ್ ಕೌನ್ಸಿಲ್ ಇಂಡಿಯಾ ಪ್ರಕಾರ ಈಗ ಸದರಿ ಕಾಲೇಜಿನಲ್ಲಿ ಇರಬೇಕಾಗಿದ್ದ ಸಿಬ್ಬಂದಿ ವರ್ಗವೆಷ್ಟು?

ಉ) ಸದರಿ ಕಾಲೇಜಿನಲ್ಲಿ ಕೊರತೆ ಇರುವ ಸಿಬ್ಬಂದಿಯನ್ನು ಯಾವಾಗ ತುಂಬಲಾಗುವುದು?

ಊ) ಸದರಿ ಕಾಲೇಜನ್ನು ಸ್ವಾಯುತ್ತ ಸಂಸ್ಥೆಯನ್ನಾಗಿ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಒಂದು. ಸರ್ಕಾರಿ ದಂತ ಮಹಾವಿದ್ಯಾಲಯ, ಬೆಂಗಳೂರು.

ಆ) 1958ರಲ್ಲಿ ಪ್ರಾರಂಭವಾಯಿತು.